ಸರ್ಕಾರಕ್ಕೆ ನಷ್ಟವಾಗಿಲ್ಲವೆಂದು ಹೇಳಿದೆ

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ ಕೆ ನ್ಯಾಷನಲ್ ಟ್ರಾವೆಲ್ಸ್ ಹಾಗೂ ಮಾಸ್ಟರ್ ಟ್ರಾವೆಲ್ಸ್‌ರವರು ಒಬ್ಬೊಬ್ಬರು ಸುಮಾರು 20-30 ಬಸ್ಸುಗಳನ್ನು ಇಟ್ಟುಕೊಂಡಿದ್ದಾರೆ ಈ ರೀತಿ ದೊಡ್ಡ ಕಂಪನಿಯವರೇ ಈ ರೀತಿ ಅವ್ಯವಹಾರ ನಡೆಸಿರುವುದರಿಂದ ಎಲ್ಲಾ ಬಸ್ಸುಗಳನ್ನು ಸೀಜ್ ಮಾಡಿ ಏಕೆಂದರೆ ಆ ವಾಹನಗಳ ಓನರ್ ಒಬ್ಬನೇ ಆಗಿರುವುದರಿಂದ ಕೇವಲ ಆ ಮೂರು ವಾಹನಗಳನ್ನು ಸೀಜ್ ಮಾಡುವ ಬದಲು ಅವರ ಎಲ್ಲಾ ವಾಹನಗಳನ್ನು ಸೀಜ್ ಮಾಡಿ ಪೊಲೀಸ್‌ಗೆ ಕೊಡಿ ಆಗ ಅವರು ಯಾವ ಕೋರ್ಟಿಗೆ ಹೋಗುತ್ತಾರೆ ನೋಡೋಣ ಹೀಗೆ ಮಾಡದೆ ಅವರ ಒಂದು ಬಸ್ಸನ್ನು ಸೀಜ್ ಮಾಡಿದರೆ ಹೇಗೆ? ಅವರು 20-30 ಬಸ್ಸಿನ ಮಾಲೀಕರು ಆಗಿರುವುದರಿಂದ, ನೀವು ಒಂದೇ ಬಸ್ಸಿನ ಮೇಲೆ ದಂಡ ಹಾಕಿದರೆ ಉಳಿದ ಬಸ್‌ಗಳಲ್ಲಿ ಅವರು ಇದನ್ನೇ ಮಾಡಿದರೆ ನೀವು ಏನು ಮಾಡುತ್ತೀರಿ? ಆದುದರಿಂದ, ತಾವು ದಯಮಾಡಿ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೋರುತ್ತೇನೆ

ಶ್ರೀ ಸಿ ಗುರುಸ್ವಾಮಿ ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ವಿಚಾರ

ಅಧ್ಯಕ್ಷರು ನೀವು ಹೀಗೆ ಮಾಡಿದರೆ ನಿಮ್ಮ ಸ್ನೇಹಿತರ ಐದು ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ I am going to close exactly after one hour I am very sorry

ಶ್ರೀ ಸಿ ಆರ್ ಸಗೀರ್ ಅಹಮದ್ ಗುಪ್ತದಳದವರನ್ನು ಬಿಟ್ಟು ಈ ಪ್ರಕರಣ ಬೆಳಕಿಗೆ ಬಂದ ನಂತರ ದಿನನಿತ್ಯ ನಾವು ತಪಾಸಣೆ ನಡೆಸುತ್ತಿದ್ದೇವೆ ಈ ರೀತಿಯಾಗಿ ಸರ್ಕಾರಕ್ಕೆ ಯಾರಾದರೂ ವಂಚನೆ ಮಾಡುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ನಾವು ಕಟ್ಟುನಿಟ್ಟಿನ ಕ್ರಮ ಜರುಗಿಸುತ್ತೇವೆ

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ ಕೆ ಬಸ್ಸುಗಳು ಒಬ್ಬರ ಹಸರಿನಲ್ಲಿರುವುದರಿಂದ ಎಲ್ಲವನೂ ಸೀಜ್ ಮಾಡಿ

ಹುಲಸೂರು ಮತ ಕ್ಷೇತ್ರ ಮೆಹಕರ್ ಗ್ರಾಮದಲ್ಲಿ ಪೋಲೀಸ್ ಔಟ್‌ಪೋಸ್ಟ್ ಸ್ಥಾಪಿಸುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 12(315)

ಸದಸ್ಯರ ಹೆಸರು ಶ್ರೀ ರಾಜೇಂದ್ರವರ್ಮ (ಹುಲ್‌ಸೂರ್)

ಉತ್ತರಿಸುವ ಸಚಿವರು ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಪ್ರಶ್ನೆ

1) ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮೆಹಕರ್ ಗ್ರಾಮವು ನರೆಯ ಮಹಾರಾಷ್ಟ್ರ ರಾಜ್ಯದ ಗಡಿ ಭಾಗದ ಗ್ರಾಮವಾಗಿದ್ದು, ಕಾನೂನು ಮತ್ತು ಸುವ್ಯವಸ್ಥೆಯ ದೃಷ್ಟಿಯಿಂದ ಹಾಗೂ ನಕ್ಸಲೀಯ ಚಟುವಟಿಕೆಗಳನ್ನು ನಿಯಂತ್ರಿಸುವ ದೃಷ್ಟಿಯಿಂದ ಈ ಗ್ರಾಮದಲ್ಲಿ ಪೋಲೀಸ್ ಔಟ್‌ಪೋಸ್ಟ್‌ನ್ನು ಪ್ರಾರಂಭಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿರುವುದು ನಿಜವಲ್ಲವೇ?

2) ಹಾಗಿದ್ದಲ್ಲಿ, ಮೇಲ್ಕಂಡ ಗ್ರಾಮದಲ್ಲಿ ಪೋಲೀಸ್ ಔಟ್‌ಪೋಸ್ಟ್ ಸ್ಥಾಪಿಸುವಲ್ಲಿ ವಿಳಂಬ ನೀತಿ ಅನುಸರಿಸುತ್ತಿರಲು ಕಾರಣಗಳೇನು?

3) ಕಾನೂನು ಸುವ್ಯವಸ್ಥೆಯ ದೃಷ್ಟಿಯಿಂದ ಹಾಗೂ ಗ್ರಾಮಸ್ಥರ ರಕ್ಷಣೆಯ ಹಿತದೃಷ್ಟಿಯಿಂದ ತ್ವರಿತವಾಗಿ ಪೋಲೀಸ್ ಔಟ್‌ಪೋಸ್ಟ್‌ನ್ನು ಸ್ಥಾಪಿಸಲಾಗುವುದೇ?

ಉತ್ತರ

1, 2 ಮತ್ತು 3) ಮೆಹಕರ್ ಗ್ರಾಮದಲ್ಲಿ ಒಂದು ಪೋಲೀಸು ಹೊರರಾಣೆಯನ್ನು ಸ್ಥಾಪಿಸಲು ಜನವರಿ 200೧ರಲ್ಲಿ ಪೋಲೀಸು ಮಹಾ ನಿರ್ದೇಶಕರು ಕಳುಹಿಸಿದ ಪ್ರಸ್ತಾವವು ಸರ್ಕಾರದ ಪರಿಶೀಲನೆಯಲ್ಲಿದೆ

ಶ್ರೀ ರಾಜೇಂದ್ರಪಮರ್ ಮಾನ್ಯ ಅಧ್ಯಕ್ಷರೆ ನಾವು ಪ್ರತಿ ಸಲ ಪ್ರಶ್ನೆ ಕೇಳುವುದು ಅದಕ್ಕೆ ಇವರು ಪ್ರಸ್ತಾವನೆಯಲ್ಲಿದೆ ಎಂದು ಹೇಳುವುದು ಇದು ಸರ್ಕಾರಕ್ಕೂ ಕೂಡ ಸರಿಯಿಲ್ಲ ನಾನು ಸುಮಾರು ಎರಡು ವರ್ಷಗಳಿಂದ ಇದೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ ಅಲ್ಲಿ ಮುಖ್ಯವಾಗಿ ಗಡಿಭಾಗದಲ್ಲಿರುವ ಜನರು ಒಹಳ ಆತಂಕದಲ್ಲಿದ್ದಾರೆ ಇದರ ಜೊತೆಗೆ ಪ್ರತಿನಿತ್ಯ ಜಾನುವಾರುಗಳ ಕಳವು ಆಗುತ್ತಿದೆ, ದರೋಡ ಆಗುತ್ತಿದೆ ಮಾನ್ಯ ಗೃಹಸಚಿವರು ಆ ಕ್ಷೇತ್ರದಲ್ಲಿ ಹುಟ್ಟಿದವರು ಅವರು ಈ ರೀತಿ ಹೇಳದೆ ನಮಗೆ ಖಚಿತವಾದ ಒಂದು ದಿನಾಂಕವನ್ನು ನಿಗದಿಪಡಿಸಬೇಕೆಂದು ಈ ಮೂಲಕ ಕೋರುತ್ತೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ಈ ಹುಲಸೂರು ಪೋಲೀಸ್ ಸ್ಟೇಷನ್ ವ್ಯಾಪ್ತಿಗೆ ಸುಮಾರು 45 ಹಳ್ಳಿಗಳು ಬರುತ್ತವೆ ಈಗ ಮೆಹಕರ್‌ನಲ್ಲಿ ಒಂದು ನೆವರೇಟ್ ಪೊಲೀಸ್ ಸ್ಟೇಷನ್ ಮಾಡಬೇಕೆಂದರೆ, ಇರತಕ್ಕಂಥ ಹಳ್ಳಿಗಳಲ್ಲಿ ಡಿವೈಡ್ ಮಾಡಬೇಕು, ಅಂದರೆ ಸ್ವಲ್ಪ ಹಚ್ಚು ಕದಿಮೆ ಎಂದು ಕಡೆಗೆ 24 ಪಳ್ಳಿಗಳು ಮತ್ತೊಂದು ಕಡೆಗೆ 26 ಹಳ್ಳಿಗಳು ಹೀಗೆ ಡಿವೈಡ್ ಮಾಡಬೇಕು ಹೀಗೆ ಮಾಡಿದರೆ ಇದು

ನಾನ್-ಫೀಜಿಬಲ್ ಆಗುತ್ತದೆ ಅಲ್ಲಿ ವರ್ಷಕ್ಕೆ ಒಟ್ಟು ಕೇಸ್ ರಿಜಿಸ್ಟರ್ ಆಗತಕ್ಕಂಥದ್ದು 60 ಹೀಗಿರುವಾಗ ಎರಡು ಪೊಲೀಸ್ ಸ್ಟೇಷನ್‌ಗಳ ಅವಶ್ಯಕತೆಯಿಲ್ಲ ಮಾಂಜ್ರಾ ನದಿ ಅಡ್ಡ ಇರುವುದರಿಂದ ಅನೇಕ ಜನರಿಗೆ ಈ ಹುಲುಸೂರು ಪೊಲೀಸ್ ಸ್ಟೇಷನ್‌ಗೆ ಬರುವುದಕ್ಕೆ ಆಗುವುದಿಲ್ಲ, ಈ ಮೆಹಕರ್ ಸರ್ಕಲ್‌ನಲ್ಲಿರುವ 24 ಹಳ್ಳಿಯ ಜನರಿಗೆ ಬರುವುದಕ್ಕೆ ಆಗುವುದಿಲ್ಲ ಇದಕ್ಕಾಗಿ ನಾನು ಸಂಬಂಧಪಟ್ಟ ಪಿಡಬ್ಲ್ಯೂಡಿ ಮಿನಿಸ್ಟರ್‌ರವರಿಗೆ ಒಂದು ಪತ್ರ ಬರೆದು ಅವರಿಗೆ ಒಂದು ಬ್ರಿಡ್ಜ್ ಮಾಡಿಕೊಡಬೇಕು ಎಂದು ಹೇಳಿದ್ದೇನೆ 24 ಕಿಲೋಮೀಟರ್‌ನಲ್ಲಿಯೇ ಈ ಪೊಲೀಸ್ ಸ್ಟೇಷನ್ ಇರುವುದರಿಂದ ನಾವು ಆ ಎಕ್ಸ್‌ಪೆಂಡಿಚರ್ ಅನ್ನು ಅವಾಯ್ಡ್ ಮಾಡಬಹುದು ಮತ್ತು 24 ಹಳ್ಳಿಗಳಿಗೆ ಒಂದು ಪೊಲೀಸ್ ಸ್ಟೇಷನ್ ತೆರೆಯುವಂಥದ್ದು ಸಾಧ್ಯವಾಗುವುದಿಲ್ಲ ಕ್ರೈಂ ರೇಟ್ ಹಾಗೂ ಎಲ್ಲದನ್ನೂ ನೋಡಿದಾಗ ಇದು ಸಾಧ್ಯವಾಗುವುದಿಲ್ಲ, ಜೊತೆಗೆ ಇದು ಎಲ್ಲಾ ಸೇರಿ 12 ಕಿಲೋಮೀಟರ್ ವ್ಯಾಪ್ತಿಯಲ್ಲಿ ಒರುವ ಪೊಲೀಸ್ ಸ್ಟೇಷನ್ ಅದಕ್ಕಾಗಿ ನಾನು ಮಾನ್ಯ ಪಿಡಬ್ಲೂದಿ ಸಚಿವರಿಗೆ ಪತ್ರ ಬರೆದು ಯಾವುದೇ ರೀತಿಯಲ್ಲಿ ಆ ಬ್ರಿಡ್ಜ್ ಅನ್ನು ಮಾಡಿಕೊಟ್ಟರೆ ಜನರಿಗೆ ಅನುಕೂಲವಾಗುತ್ತದೆ ಮತ್ತು ಮಳಗಾಲದಲ್ಲೂ ಕೂಡ ಜನರಿಗೆ ಪೊಲೀಸ್ ಸ್ಟೇಷನ್‌ಗೆ ಬಂದು ಹೋಗಲಿಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿದ್ದೇನೆ ಪ್ರತಿ ವರ್ಷ ನಾವು ಒಂದು ಪೊಲೀಸ್ ಸ್ಟೇಷನ್ ತೆರೆದರೆ ಈಗಾಗಲೇ ಹೇಳಿದ ಹಾಗೆ 40 ಲಕ್ಷ ರೂಪಾಯಿ ಖರ್ಚಾಗುತ್ತದೆ ಆದರೆ ಬ್ರಿಡ್ಜ್ ಮಾಡಿದರೆ ಸುಮಾರು ಒಂದರಿಂದ ಒಂದೂವರೆ ಕೋಟಿ ರೂಪಾಯಿ ಆಗಬಹುದು ಇದನ್ನು ಮಾಡಬೇಕೆಂದು ನಾನು ಈಗಾಗಲೇ ಪತ್ರ ಬರೆದಿದ್ದೇನೆ, ಈ ಬಗ್ಗೆ ಅವರು ಕೂಡ ಪರ್‌ಸ್ಯೂ ಮಾಡಿದರೆ ಅದು ಬೇಗನೆ ಆಗುವುದರ ಜೊತೆಗೆ ಸಮಸ್ಯೆ ಕೂಡ ಬಗೆಹರಿಯುತ್ತದೆ ಪೊಲೀಸ್ ಔಟ್‌ಪೋಸ್ಟ್ ಬಗ್ಗೆ ನಾನು ಹೇಳಿದ್ದೇನೆ, ಈಗಾಗಲೇ ಡಿಸಿಪಿ ಅವರಿಂದ ಒಂದು ಪ್ರಸ್ತಾವನೆ ಬಂದಿದೆ ನಾನು ಅದನ್ನು ಆರ್ಥಿಕ ಇಲಾಖೆಗೆ ಕಳುಹಿಸಿ, ಔಟ್‌ಪೋಸ್ಟ್ ಮಾಡುವುದಕ್ಕೆ ಬೇಕಾದರೆ ಪ್ರಯತ್ನ ಮಾಡುತ್ತೇನೆ

ಲಿಂಗಸಗೂರು ತಾಲ್ಲೂಕಿನ ಮುದಗಲ್‌ನಲ್ಲಿ ಕುಡಿಯುವ ನೀರಿನ ಅಭಾವ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 11(43)

ಸದಸ್ಯರ ಹೆಸರು ಶ್ರೀ ಹಸನಸಾಬ್ ನಬೀಸಾಬ್ ಧೋತಿಹಾಲ್(ಕುಷ್ಟಗಿ)

ಉತ್ತರಿಸುವವರು ಶ್ರೀ ಎಸ್ ಎಂ ಕೃಷ್ಣ(ಮುಖ್ಯಮಂತ್ರಿಯವರು)

ಪ್ರಶ್ನೆ